# ಹೊಸ ಪೀಳಿಗೆಯ ಕಥೆ- ಕುತೂಹಲದಲ್ಲಿ ಸಿಂಪಲ್ ಸುನಿ




‘ಗತವೈಭವ’ ಸಿನಿಮಾ ನಂತರ ನಿರ್ದೇಶಕ ಸಿಂಪಲ್ ಸುನಿ ಮತ್ತೊಂದು ಸಿನಿಮಾದಲ್ಲಿ ತೊಡಗಿಕೊಂಡಿದ್ದಾರೆ. ‘ಲಂಬೋದರ 2.0’ ಸಿನಿಮಾ ಕೈಗೆತ್ತಿಕೊಂಡಿದ್ದು, ಈ ಸಿನಿಮಾದ ವಸ್ತುವಿಷಯದ ಕುರಿತು ಮಾತನಾಡುತ್ತಾ, ಬದಲಾಗುತ್ತಿರುವ ಸಂಬಂಧಗಳ ಅರ್ಥ–ಆಳದ ಕುರಿತು ತಮ್ಮದೇ ವಿಶ್ಲೇಷಣೆ ಮಾಡಿದ್ದಾರೆ.

‘ಎಐ (ಕೃತಕ ಬುದ್ಧಿಮತ್ತೆ), ಜೆನ್ ಝೀ ಸೂಕ್ಷ್ಮತೆಗಳು ಹಾಗೂ ರೊಬೊಟಿಕ್ಸ್ ಪರಿಕಲ್ಪನೆಯಲ್ಲಿ ಈ ಹೊಸ ಸಿನಿಮಾ ಮೂಡಿಬರುತ್ತಿದೆ. ಈ ಅಂಶಗಳು ಸಿನಿಮಾದಾಚೆಗೂ ನನ್ನನ್ನು ಅಚ್ಚರಿಗೊಳಿಸುತ್ತವೆ’ ಎಂದಿದ್ದಾರೆ.

‘ಈ ತಲೆಮಾರಿನ ಮಕ್ಕಳು ಯಾವುದೇ ಹಿಂಜರಿಕೆಯಿಲ್ಲದೇ ತಮಗೆ ಯಾವುದು ಇಷ್ಟ, ಯಾವುದು ಇಷ್ಟವಿಲ್ಲ ಎಂದು ತಮ್ಮ ಪೋಷಕರಿಗೆ ನೇರವಾಗಿ ಹೇಳುತ್ತಾರೆ. ಸಂಬಂಧಗಳ ವಿಷಯದಲ್ಲಿ ಈ ಪೀಳಿಗೆಯ ದೃಷ್ಟಿಕೋನ ಬಹಳ ಕುತೂಹಲಕಾರಿಯಾಗಿದೆ’ ಎನ್ನುತ್ತಲೇ, ಕಾಲದೊಂದಿಗೆ ಪ್ರೀತಿಯಲ್ಲಿನ ಬದ್ಧತೆ ಕುರಿತ ಆಲೋಚನೆಯೂ ಹೇಗೆಲ್ಲಾ ಬದಲಾಗುತ್ತಿದೆ ಎಂಬುದನ್ನು ವಿವರಿಸಿದ್ದಾರೆ.

‘ಒಂದು ಹುಡುಗ ಹುಡುಗಿ ಪ್ರೀತಿ ಮಾಡುವುದು ಎಂದರೆ ಮದುವೆ ಮಾಡಿಕೊಳ್ಳುವ ಉದ್ದೇಶದೊಂದಿಗೆ ಪ್ರೀತಿ ಮಾಡುತ್ತಿದ್ದರು. ಈಗಿನ ಯುವಪೀಳಿಗೆ ಸಂಬಂಧದೊಂದಿಗೆ ಪ್ರಯೋಗ ಮಾಡುವ ಕುರಿತು ಮಾತನಾಡುತ್ತದೆ. ಮದುವೆ ಎನ್ನುವುದು ಅವರ ಆಲೋಚನೆಗಳಲ್ಲಿ ಕೂಡ ಇಲ್ಲ’ ಎಂದು ನಗುತ್ತಲೇ ಉತ್ತರಿಸಿದ್ದಾರೆ.

ಕನ್ನಡ ಸಿನಿಮಾರಂಗದ ಪಲ್ಲಟಗಳ ಕುರಿತು ಮಾತನಾಡಿರುವ ಅವರು, ‘ಈ ಮೊದಲು ಕನ್ನಡ ಪ್ರೇಕ್ಷಕರು ದೊಡ್ಡ ಹೀರೊ ಅಥವಾ ಹೆಸರು ಮಾಡಿದ್ದ ನಿರ್ದೇಶಕನ ಸಿನಿಮಾ ಎಂದರೆ ಸಾಕು, ಸಿನಿಮಾಮಂದಿರಕ್ಕೆ ಬರುತ್ತಿದ್ದರು. ಈಗ ಹಾಗಿಲ್ಲ. ಈಗಿನ ಪ್ರೇಕ್ಷಕರು ಹಲವು ಭಾಷೆಯ ಸಿನಿಮಾಗಳನ್ನು ನೋಡುತ್ತಾರೆ. ಜಾಗತಿಕ ಮಟ್ಟದಲ್ಲಿ ಯೋಚಿಸುತ್ತಾರೆ. ಕಾಲಕ್ರಮೇಣ ಕಂಟೆಂಟ್‌ಗಳೇ ಮುಖ್ಯವಾಗುತ್ತವೆ’ ಎಂದಿದ್ದಾರೆ.

# ಸ್ವತಿಷ್ಠಾ ಕೃಷ್ಣನ್ ಸಿನಿಮಾ ಸಿದ್ಧಾಂತ



‘ಈಗ ಸಿನಿಮಾ ನಿರ್ದೇಶಕರು ರಿಯಲಿಸ್ಟಿಕ್ ಕಥೆಗಳತ್ತ ಹೊರಳುತ್ತಿದ್ದಾರೆ. ಹಾಗೆಯೇ ಹೀರೊಯಿನ್‌ಗಳನ್ನು ಸಿನಿಮಾದಲ್ಲಿ ಬಿಂಬಿಸುತ್ತಿರುವ ರೀತಿಯಲ್ಲಿಯೂ ಬದಲಾವಣೆ ಕಾಣುತ್ತಿದೆ’ ಎಂದಿದ್ದಾರೆ ನಟಿ ಸ್ವತಿಷ್ಠಾ ಕೃಷ್ಣನ್.

‘ಒಂದು ಸರಳ ಪ್ರೇಮಕಥೆ’ ಚಿತ್ರದ ಮೂಲಕ ಕನ್ನಡ ಸಿನಿಮಾರಂಗ ಪ್ರವೇಶಿಸಿದ್ದ ನಟಿ ಸ್ವತಿಷ್ಠಾ ಕೃಷ್ಣನ್ ಅವರ ಮತ್ತೊಂದು ಸಿನಿಮಾ ‘ರಕ್ಕಸಪುರದೋಳ್’ ಈಚೆಗೆ ಬಿಡುಗಡೆ ಕಂಡಿದೆ. ರಾಜ್ ಬಿ. ಶೆಟ್ಟಿ ಪತ್ನಿ ಪಾತ್ರದಲ್ಲಿ ಸ್ವತಿಷ್ಠಾ ಕಾಣಿಸಿಕೊಂಡಿದ್ದು, ಈ ಸಿನಿಮಾ ಅನುಭವ ಹಾಗೂ ಬದಲಾಗುತ್ತಿರುವ ಸಿನಿಮಾ ವ್ಯಾಕರಣ, ಸಿನಿಮಾ ಆಯ್ಕೆಯಲ್ಲಿನ ತಮ್ಮ ಮಾನದಂಡಗಳ ಕುರಿತು ಮಾತನಾಡಿದ್ದಾರೆ.

‘ನಾನು ಕಥೆಗಳನ್ನು ಆರಿಸಿಕೊಳ್ಳುವಾಗ ಯಾವುದೇ ಫಾರ್ಮುಲಾ ಬಳಸುವುದಿಲ್ಲ. ನನಗೆ ಪಾತ್ರದಲ್ಲಿ ಕಂಫರ್ಟೆಬಲ್ ಇರುವುದು ಹಾಗೂ ಅದರೊಂದಿಗೆ ಕನೆಕ್ಟ್ ಆಗುವುದು– ಇವೆರಡು ಅಂಶಗಳನ್ನು ಗಮನಿಸಿಯೇ ಆರಿಸಿಕೊಳ್ಳುತ್ತೇನೆ’ ಎಂದು ಹೇಳಿದ್ದಾರೆ.

‘ಕನ್ನಡದಲ್ಲಿ ಮೊದಲನೆ ಸಿನಿಮಾದಲ್ಲಿ ನಟಿಸುತ್ತಿದ್ದಂತೆ ಮತ್ತೆರಡು ಸಿನಿಮಾಗಳ ಅವಕಾಶಗಳು ಬಂದವು. ಎರಡೂ ದೊಡ್ಡ ಪ್ರಾಜೆಕ್ಟ್‌ಗಳು. ಆದರೆ ನಾನು ಏನನ್ನು ಬಯಸುತ್ತಿದ್ದೆನೋ ಅದರೊಂದಿಗೆ ಆ ಪಾತ್ರಗಳು ಹೊಂದಿಕೆಯಾಗುತ್ತಿರಲಿಲ್ಲ. ಸಿನಿಮಾಗಳಿಗೆ ಸುಮ್ಮನೆ ಸಹಿ ಹಾಕುವ ಬದಲು ಆ ಪಾತ್ರದೊಂದಿಗೆ ಕನೆಕ್ಟ್ ಆಗುವುದು ಮುಖ್ಯ’ ಎಂದು ತಮ್ಮ ಮನದ ಮಾತನ್ನು ತೆರೆದಿಟ್ಟಿದ್ದಾರೆ.

ಕನ್ನಡ ಸಿನಿಮಾರಂಗಕ್ಕೆ ಬರುವುದು ತಮ್ಮ ಕರಿಯರ್‌ನ ಒಂದು ಮುನ್ನಡೆ ಮಾತ್ರವಾಗಿರದೇ ತಮ್ಮದೇ ಸ್ವಂತ ಮನೆಗೆ ಬಂದ ಅನುಭವ ಎಂದು ಹೇಳಿಕೊಂಡಿರುವ ಅವರು, ಬಹುಭಾಷೆಗಳಲ್ಲಿ ತಮ್ಮ ನೆಲೆಗಟ್ಟನ್ನು ಕಟ್ಟಿಕೊಳ್ಳುತ್ತಲೇ ಕನ್ನಡ ಸಿನಿಮಾರಂಗದತ್ತ ಹೊರಳಿದವರು.

‘ರಕ್ಕಸಪುರದೋಳ್’ ಸಿನಿಮಾ ಕುರಿತು ಮಾತನಾಡುತ್ತಾ, ‘ನನಗೆ ರಾಜ್ ಅವರೊಂದಿಗೆ ಕೆಲಸ ಮಾಡಬೇಕೆಂದು ಬಹಳ ಆಸೆಯಿತ್ತು. ಸಿನಿಮಾದಲ್ಲಿನ ಭಾವನಾತ್ಮಕತೆ ಹಾಗೂ ಪಾತ್ರಗಳನ್ನು ರೂಪಿಸಿದ ರೀತಿ, ಈ ಪ್ರಾಜೆಕ್ಟ್ ಮಿಸ್ ಮಾಡಿಕೊಳ್ಳಬಾರದೆಂದು ಅನಿಸಲು ಕಾರಣ’ ಎಂದು ವಿವರಣೆ ನೀಡಿದ್ದಾರೆ.

ಹಲವು ಜಾನರ್‌ಗಳಲ್ಲಿ ತಮ್ಮನ್ನು ಅನ್ವೇಷಿಸಿಕೊಳ್ಳಲು ಉತ್ಸುಕರಾಗಿರುವ ಸ್ವತಿಷ್ಠಾ, ರಿಯಲಿಸ್ಟಿಕ್ ಸಿನಿಮಾಗಳೊಂದಿಗೆ ಗ್ಲಾಮರಸ್ ಪಾತ್ರಗಳಿಗೂ ಸೈ ಎನ್ನುತ್ತಿದ್ದಾರೆ. ಕನ್ನಡದೊಂದಿಗೆ ತಮಿಳು ಪ್ರಾಜೆಕ್ಟ್‌ಗಳಲ್ಲಿಯೂ ತೊಡಗಿಕೊಂಡಿದ್ದಾರೆ.